# ಕರ್ನಾಟಕದ ಸಿಂಗಂ
# ರವಿ ಡಿ.ಚೆನ್ನಣ್ಣವರ್



**ಹುಟ್ಟಿದ್ದು ಹಳ್ಳಿಯಾದರೂ ಇಂದು ದಿಲ್ಲಿಯವರೆಗೂ ತನ್ನ ದಕ್ಷ ಅಧಿಕಾರದಿಂದ ತನ್ನದೇ ಆದ ಛಾಪನ್ನು ಮೂಡಿಸಿರುವವರು ಐ.ಪಿ.ಎಸ್. ಕೆಂಪ ಅಲಿಯಸ್ ರವಿ ಡಿ.ಚೆನ್ನಣ್ಣವರ್. ಇವರು ಕೆಲಸ ಮಾಡಿದ ಎಲ್ಲಾ ಜಿಲ್ಲೆಗಳಲ್ಲೂ ಯುವಕರಿಗೆ ಸ್ಫೂರ್ತಿಯಾಗಿದ್ದಾರೆ, ಸಮಾಜಮುಖಿ ಹಿರಿಯರಿಂದ ಭೇಷ್ ಎನಿಸಿಕೊಂಡಿದ್ದಾರೆ. I.P.S. ಪರೀಕ್ಷೆ ಕಟ್ಟಲು ಹಲವರಿಗೆ ಪ್ರೇರಣೆಯಾಗಿದ್ದಾರೆ. ರವಿ ಅವರ ಜೀವನ, ಓದು, ನೋವು, ಹೋರಾಟ ಇವುಗಳನ್ನು ಅವರ ಮಾತಲ್ಲೆ ಕೇಳೋಣ.**



ಮನೋಜ್ ಕುಮಾರ್ ಕೆ.ಬಿ.
ಶಿಕ್ಷಕ

1985 ಜುಲೈ 23 ರಂದು ಗದಗ್ ಜಿಲ್ಲೆಯ ನೀಲಗುಂದ ತಾಲೂಕಿನ ಕೋಣೆಹಳ್ಳಿ/ಕೋಡಿ ಗ್ರಾಮದಲ್ಲಿ ದ್ಯಾವಪ್ಪ ಮತ್ತು ರತ್ನಮ್ಮರವರ ಮಗನಾಗಿ ಕೂಲಿ ಕುಟುಂಬದಲ್ಲಿ ಜನಿಸಿದೆ. 8 ವರ್ಷದ ಬಾಲಕನಾಗಿರುವಾಗಲೇ ತಂದೆತಾಯಿಯರಿಗೆ ಕೃಷಿ ಕೆಲಸದಲ್ಲಿ ಸಹಾಯ ಮಾಡತೊಡಗಿದ ನಾನು ಗದಗ್ ಹಾಗೂ ನೀಲಗುಂದ ಪ್ರದೇಶದಲ್ಲಿ ಮಾಡುವಂತಹ ಎಲ್ಲಾ ಕಸಿ/ಕೃಷಿ ಚಟುವಟಿಕೆಗಳನ್ನು ತಂದೆ ತಾಯಿ ಜೊತೆಗೆ ಸೇರಿ ಮಾಡುತ್ತಿದ್ದೆ. ಉಳುವುದಾಗಿರಲಿ, ಬಿತ್ತುವುದಾಗಿರಲಿ, ಕಳೆ ತೆಗೆಯುವುದಾಗಿರಲಿ, ಶೇಂಗ ಕೀಳುವುದಾಗಿರಲಿ, ಜೋಳ, ಹತ್ತಿ , ಮೆಣಸು, ಎಲ್ಲಾ ಕೆಲಸಕಾರ್ಯಗಳನ್ನು ಮಾಡುತ್ತಿದ್ದೆ. ನಮ್ಮ ಕುಟುಂಬದ ನಿರ್ವಹಣೆಗೆ ನಾವುಗಳು ಪ್ರತಿನಿತ್ಯ ದಿನಕೂಲಿ ಮಾಡುವುದು ಅನಿವಾರ್ಯ. ಇದರ ಜೊತೆಗೆ ಪ್ರೈಮರಿ ವಿದ್ಯಾಭ್ಯಾಸವನ್ನು ನಿಲಗುಂದದಲ್ಲಿ ಹಾಗೂ ಹೈಸ್ಕೂಲು ವಿದ್ಯಾಭ್ಯಾಸವನ್ನು ಸುರಟೂರಿನಲ್ಲಿ (ತಾಯಿಯ ತವರೂರು) ಹಾಗೂ ಮುಳುಗುಂದದಲ್ಲಿ ಮಾಡಿದೆ. ಪ್ರೌಢಶಾಲೆಯಲ್ಲಿ ಓದುತ್ತಿರುವ ಸಮಯದಲ್ಲಿ ಬೆಳೆ ಕಟಾವು ಬಂದಾಗ ಯಾವಾಗಲೂ ನಾನು ಹೊಲದಲ್ಲೆ ಇರುತ್ತಿದ್ದೆ. ಇದು ನನ್ನ ಓದಿನ ಜೊತೆಯಲ್ಲಿ ಸಾಗುತ್ತಿದ್ದ ಬದುಕು. ಆದರೆ ನನ್ನ ಒಂದು ಸ್ವಭಾವವೆಂದರೆ ತಂದೆ-ತಾಯಿ ಹಾಗೂ ಗುರುಗಳು ಏನೇ ಹೇಳಿದರೂ ಅವಿನಯವಾಗಿ ಎಂದೂ ನಡೆದುಕೊಳ್ಳುತ್ತಿರಲಿಲ್ಲ. ನನಗೆ ನೆನಪಿದೆ - ಸುಮಾರಿಗೆ 1996-97 ರಲ್ಲಿ ನಮ್ಮೂರಿಗೆ ಒಂದು ಮನೆಗೆ ಚಾನಲ್ ಕೇಬಲ್ ಬಂತು. ಆ ಕೇಬಲ್‌ನಲ್ಲಿ ಉದಯ ಚಾನೆಲ್ ಬರುತ್ತಿತ್ತು . ಆ ಚಾನಲ್‌ನಲ್ಲಿ ಪ್ರತಿದಿನ ಸಾಯಂಕಾಲ 6.30 ಗೆ ಮೂವಿ ಬರುತ್ತಿತ್ತು . ರವಿವಾರ 2 ಮೂವಿ ಬರುತ್ತಿತ್ತು . ನಾನು ತುಂಬ ಇಷ್ಟೆಯಿಂದ ರವಿವಾರದ ಆ ಮೂವಿ ನೋಡಲು ಕೂತ ಸಮಯಕ್ಕೆ ನನ್ನ ತಾಯಿ ಟಿ.ವಿ. ನೋಡುತ್ತಿದ್ದ